ಉ) ಕಾಡಾನೆಗಳನ್ನು ಹಿಡಿಯಲು ಸರ್ಕಾರ ಯಾವ ಯೋಜನೆ ಹಾಕಿಕೊಂಡಿದೆ ,

ಊ) ಹಾಗಿದ್ದಲ್ಲಿ, ಆನೆಗಳನ್ನು ಹಿಡಿಯಲು ಸರ್ಕಾರ ವಿಫಲವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ಚೆನ್ನಿಗಪ್ಪ (ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಬೆಳಗಾವಿ ಜಿಲ್ಲೆಯಲ್ಲಿ ಇಲ್ಲಿಯವರೆಗೆ 67 ಪ್ರಕರಣಗಳ ಪೈಕಿ 58 ಪ್ರಕರಣಗಳಿಗೆ ಸರ್ಕಾರದ ಆದೇಶ ದಿನಾಂಕ 12–02–2002ರ ಪ್ರಕಾರ ಪರಿಹಾರ ಧನ ರೂ 82,680/– ಪಾವತಿಸಿದ್ದು ಇನ್ನುಳಿದ 9 ಪ್ರಕರಣಗಳಲ್ಲಿ ಅಗತ್ಯ ದಾಖಲೆಗಳನ್ನು ಮೂರೈಸಲು ಸೂಚಿಸಿದೆ

ಇ) ಬೆಳಗಾವಿ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ 2 ಮಂದಿ ಮೃತಪಟ್ಟಿದ್ದು ಸರ್ಕಾರದ ಆದೇಶ ದಿನಾಂಕ 12–02–2002ರ ಪ್ರಕಾರ ತಲಾ ರೂ 100 ಲಕ್ಷ ಪರಿಹಾರ ಧನ ಪಾವತಿಸಲಾಗಿದೆ

ಈ) ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ದಿನಾಂಕ 12–2–2002ರನ್ವಯ ರೂ 100 ಲಕ್ಷಗಳ ಪರಿಹಾರವನ್ನು ನೀಡಲಾಗುತ್ತಿದ್ದಿತು ಈಗ ಈ ಮೊತ್ತವನ್ನು ದಿನಾಂಕ 17/1/07ರ ಸರ್ಕಾರಿ ಆದೇಶದಲ್ಲಿ ,ರೂ 150 ಲಕ್ಷಗಳಿಗೆ ಹೆಚ್ಚಿಸಲಾಗಿದೆ

ಉ) ಕಾಡಾನೆಗಳನ್ನು ಹಿಡಿಯಲು ಯಾವುದೇ ಯೋಜನೆಯನ್ನು ರೂಪಿಸಿರುವುದಿಲ್ಲ ಆದರೆ ಕಾಡಾನೆ ಹಾವಳಿಯನ್ನು ತಡೆಯಲು ಹಾಗೂ ಅವುಗಳನ್ನು ಕಾಡಿಗೆ ಓಡಿಸಲು ಕ್ರಮ ತೆಗೆದುಕೊಂಡು ನಿಯಂತ್ರಿಸಲಾಗುತ್ತಿದೆ

ಊ) ಬೆಳಗಾವಿ ಜಿಲ್ಲೆಯಲ್ಲಿ ಅನೆಗಳ ಹಾವಳಿ ನಿಯಂತ್ರಣದಲ್ಲಿರುವುದರಿಂದ ಅವುಗಳನ್ನು ಹಿಡಿಯುವ ಅವಶ್ಯಕತೆ ಕಂಡುಬಂದಿಲ್ಲ

735 (1145) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲುಕಿನಲ್ಲಿ ಕೈಗಾರಿಕಾ ವಿಕಾಸ ಯೋಜನೆಯಡಿ ಕೈಗಾರಿಕಾ ವಸಾಹತು ಸ್ಥಾಪನೆ ಮಾಡಲು ಸರ್ಕಾರ ನಿರ್ಧರಿಸಲಾಗಿದೆಯೇ ,

ಆ) ಹಾಗಿದ್ದಲ್ಲಿ, ಸರ್ಕಾರ ಇದಕ್ಕಾಗಿ ವಶಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣವೆಷ್ಟು ,

ಇ) ಕೈಗಾರಿಕಾ ವಸಾಹತು ನಿರ್ಮಾಣ ಯೋಜನೆ ಈಗ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರ್ಣಗೊಳ್ಳಲಿದೆ ,

ಈ) ಇದರಿಂದ ಆಗುವ ಪ್ರಯೋಜನಗಳಾವುವು ?

ಶ್ರೀ ಶಿವಾನಂದ ನಾಯ್ಕ (ಸಣ್ಣ ಕೈಗಾರಿಕಾ ಸಚಿವರು)

ಅ) ಹೌದು ಸಿಂಧಗಿಯಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು ನಿರ್ಧರಿಸಲಾಗಿದೆ

ಆ) ಮೇಲಿನ ಕೈಗಾರಿಕಾ ವಸಾಹತು ಸ್ಥಾಪಿಸಲು ಸುಮಾರು 10 ಎಕರೆ ಭೂಮಿಯನ್ನು ಕೆ ಐ ಎ ಡಿ ಬಿ ಯಿಂದ ಪಡೆದುಕೊಳ್ಳಲು ನಿರ್ಧರಿಸಲಾಗಿದೆ

ಇ) ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಕೆ ಐ ಎ ಡಿ ಬಿ ಯಿಂದ ಹಸ್ತಾಂತರ ಪಡೆದುಕೊಂಡ ತಕ್ಷಣ ಮುಂದಿನ ಹಣಕಾಸು ವರ್ಷದಲ್ಲಿ (2007–08) ಪೂರ್ಣಗೊಳಿಸಲು ಯೋಜಿಸಲಾಗಿದೆ

ಈ) ಇದರಿಂದ ಸ್ಥಳೀಯ ಪ್ರದೇಶದ ಕೈಗಾರಿಕೀಕರಣ ಹಾಗೂ ಕುಶಲಕರ್ಮಿಗಳಿಗೆ ಮತ್ತು ಇತರರಿಗೆ ಉದ್ಯೋಗ ಕಲ್ಪಿಸಲು ಅವಕಾಶವಾಗುವುದು ಮತ್ತು ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವುದು

738 (747) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ರಾಜ್ಯದ ಎಲ್ಲ ಇಲಾಖೆಗಳ ಯೋಜನೆ ಮತ್ತು ಯೋಜನೇತರದಲ್ಲಿ ಅನುಮೋದನೆಗೊಂಡ ಕಾಮಗಾರಿಗಳಿಗೆ ನೀಡಿದ ಆರ್ಥಿಕ ಮೊತ್ತವೆಷ್ಟು , (ಇಲಾಖಾವಾರು ವಿವರ ಒದಗಿಸುವುದು) ,

ಆ) ದಿನಾಂಕ 15–1–2007ರವರೆಗೆ ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು , ಹಾಗೂ ಇದರಲ್ಲಿ ಎಷ್ಟು ಖರ್ಚಾಗಿರುತ್ತದೆ ,

ಇ) ಪೂರ್ತಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 2006–07ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಕಾಮಗಾರಿಗಳ ಸಲುವಾಗಿ ಇಲಾಖೆಗಳಿಗೆ ನೀಡಿರುವ ಅನುದಾನಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಜನವರಿ 2007ರವರೆಗಿನ ಖರ್ಚನ್ನು ಮಹಾಲೇಖಪಾಲರು ಇನ್ನೂ ಕ್ರೋಢೀಕರಿಸಬೇಕಾಗಿದ್ದು, ನವೆಂಬರ್ 2006ರ ಅಂತ್ಯಕ್ಕೆ ಖರ್ಚಾಗಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಇ) ಕಾಮಗಾರಿಗಳ ಪ್ರಗತಿಯನ್ನು ಅನುಸರಿಸಿ ಅದರಂತೆ ಹಣ ಬಿಡುಗಡೆ ಮಾಡಲಾಗುತ್ತದೆ